# ನೇರಳೆ ಹುಡುಗಿ

ನವಿಲುಗಣ್ಣ ಹುಡುಗಿಗೆ
ನೇರಳೆ ಹೆರಳು
ಅವಳ ಮೈಯ್ಯ ತಿರುವು
–ಗಳ ಕವಿತೆಗಳಿಗೆ
ಬೆರಗಾಗಿದೆ ಇರುಳು.

ಹೊಳೆಯಗುಂಟ ನಡೆದು
ಹೋಗುವಾಗ ನೈದಿಲೆ
ಕರೆದಂತೆ – ಏನೀಗ
ಅವಳು ಮಾತಾಡುವುದಿಲ್ಲ
ಧ್ಯಾನವೆಂದರೆ ಮಣ್ಣು
ಮಣ್ಣೆಂದರೆ ಮೊಳಕೆ ಬೇರು

ಹುಕಿಬಂದಾಗ ನವಿಲ
ಸಮಸಮಕ್ಕೆ ಪದ್ಯ
ಗೀಚುತ್ತಾಳೆ – ನೇರಳೆ
ಪಾನಕ ಹೀರುತ್ತಾಳೆ
ಮತ್ತೆ ಸಿಗರೇಟು
ಸುಡುತ್ತ ಅವನಿಗಾಗಿ
ಚಡಪಡಿಸುತ್ತಾಳೆ

ನೀಳ ಬೆರಳುಗಳಿಗೆ
ಉಂಗುರ ತೊಡಿಸಿಲ್ಲ
ಬಣ್ಣ ಹಚ್ಚಿದ್ದಾಳೆ
ನೇರಳೆಗೆ ಸಾಯುತ್ತಾಳೆ
ಮಣ್ಣು ಕಾಡಿದಾಗ
ಅಮಲಿಗೆ ಜಾರುತ್ತಾಳೆ

● **ವಿಜಯಶ್ರೀ ಹಾಲಾಡಿ**



ವಾಗೀಶ ಹೆಗಡೆ